ವಿಶಾಖ ಎನ್.



# ಸಂಜೀವ್ ಗುರು ಶಿವಾಜಿ!

ರೀತಾ ರಾಮಮೂರ್ತಿ ಹಾಗೂ ಉದಯ್ ಜರಿವಾಲಾ 'ಸಂಜೀವ್ ಕುಮಾರ್ – ದಿ ಆ್ಯಕ್ಟರ್ ವಿ ಆಲ್ ಲವ್ಡ್' ಎಂಬ ಆತ್ಮಕಥೆಯನ್ನು ಇತ್ತೀಚೆಗೆ ಬರೆದರು. 1938ರಿಂದ 1985ರವರೆಗಿನ ಸಂಜೀವ್ ಕುಮಾರ್ ಬದುಕಿನ ಆಸಕ್ತಿಕರ ಪುಟಗಳನ್ನು ಈ ಕೃತಿ ಒಳಗೊಂಡಿದೆ. ಸಂಜೀವ್ ತಣ್ಣಗಿನ ಅಭಿನಯ ಹಾಗೂ ಚಿಕ್ಕ ವಯಸ್ಸಿನಲ್ಲೇ ವೃದ್ಧನ ಪಾತ್ರಗಳಿಗೂ ಅವರು ಜೀವ ತುಂಬಿದ ಬಗೆಯನ್ನು ಮಹತ್ವದ ವಿವರಗಳೊಂದಿಗೆ ಬಣ್ಣಿಸಿರುವ ಕೃತಿ ಇದು. ಇದರಲ್ಲಿ ದಕ್ಷಿಣ ಭಾರತದ ಚಿತ್ರಗಳಿಗೂ ಸಂಜೀವ್ ಅವರಿಗೂ ಇದ್ದ ನಂಟಿನ ಮಹತ್ವದ ಮಾಹಿತಿಯೂ ಇದೆ. 1965ರಲ್ಲಿ ಶಿವಾಜಿ ಗಣೇಶನ್ ತಮಿಳಿನಲ್ಲಿ 'ಶಾಂತಿ' ಎಂಬ ಸಿನಿಮಾ ಮಾಡಿದ್ದರು. ಮೂರು ವರ್ಷಗಳ ನಂತರ ಅದನ್ನೇ 'ಗೌರಿ' ಎಂಬ ಹೆಸರಿನಲ್ಲಿ ಹಿಂದಿಗೆ ರೀಮೇಕ್ ಮಾಡಿದರು.

'ನಾನ್ ಸಿವಾಜಿಯನ್ ಮಾನವನ್' ಎಂಬ ಹಳೆಯ ಅಧ್ಯಾಯವೊಂದು ಸಂಜೀವ್ ಕುಟುಂಬಸ್ಥರ ಸಂಗ್ರಹದಲ್ಲಿ ಇತ್ತು. ಅವರ ಸಂಬಂಧಿಕರೇ ಆದ ಉದಯ್ ಜರಿವಾಲಾ ಅವರು ಅದನ್ನು ಸೂಕ್ಷ್ಮವಾಗಿ ಗಮನಿಸಿದರು. 'ನಾನು ಶಿವಾಜಿ ಶಿಷ್ಯ' ಎಂಬರ್ಥ ಹೊರಡಿಸುವ ಅಧ್ಯಾಯ ಅದು. ಅದನ್ನು ಈ ಕೃತಿಯಲ್ಲಿ ಉದಯ್ ಸೇರಿಸಿದರು. 'ಗೌರಿ' ಚಿತ್ರದಲ್ಲಿ ಸಂಜೀವ್ ಅವರಿಗೆ ಸಣ್ಣ ಪಾತ್ರವಿತ್ತು. ಅವರ ಶ್ರದ್ಧೆಯನ್ನು ಗಮನಿಸಿದ ಶಿವಾಜಿ ಆಗಲೇ, 'ಮುಂದೆ ಇವನು ದೊಡ್ಡ ನಟನಾಗುತ್ತಾನೆ' ಎಂದು ಹೊಗಳಿದ್ದರು. ಅಷ್ಟೇ ಅಲ್ಲ, ಅಭಿನಯಕ್ಕೆ ಸಂಬಂಧಿಸಿದಂತೆ ಅನೇಕ ಸಲಹೆಗಳನ್ನೂ ನೀಡಿದ್ದರು.

ಸಂಜೀವ್ ಮೂಲ ಹೆಸರು ಹರಿ. ಶಿವಾಜಿ, 'ಹರಿ' ಎಂದೇ ಕರೆಯುತ್ತಿದ್ದುದು. ಸಂಜೀವ್ ಹಾಗೂ ಶಿವಾಜಿ ನಡುವಿನ ಬಾಂಧವ್ಯ ಯಾವ ಮಟ್ಟಕ್ಕೆ ಹೋಯಿತೆಂದರೆ, ತಮಿಳಿನ ಚಿತ್ರದ ರೀಮೇಕ್ ಮಾಡಬೇಕಾದಾಗಲೆಲ್ಲ ಸಂಜೀವ್ ಹಿಂದಿಯಲ್ಲಿ ಆ ಪಾತ್ರ ಮಾಡಲಿ ಎಂದು ನಿರ್ಮಾಪಕರೂ ನಿರ್ಧರಿಸತೊಡಗಿದರು. 'ಅವನ್ ದಾನ್ ಮನಿದನ್' ಎಂಬ ತಮಿಳು ಚಿತ್ರ 'ಶಾಂದಾರ್' ಆಗಿ ಹಿಂದಿಗೆ ರೀಮೇಕ್ ಆಯಿತು. 'ಜ್ಞಾನ ಒಲಿ' ಕೂಡ 'ದೇವತಾ' ಆಗಿ ಹಿಂದಿಗೆ ಬಂತು. ಮೂಲ ಚಿತ್ರದಲ್ಲಿ ಶಿವಾಜಿ ನಿರ್ವಹಿಸಿದ್ದ ಪಾತ್ರವನ್ನು ಹಿಂದಿಯಲ್ಲಿ ಸಂಜೀವ್ ಅಭಿನಯಿಸಿದರು.

ಶಿವಾಜಿ ಚಿತ್ರಗಳಲ್ಲಿ ಉದ್ದುದ್ದ ಸಂಭಾಷಣೆ ಇರುತ್ತಿತ್ತು. ಹೀಗಾಗಿ ರೀಮೇಕ್ ಸವಾಲಾಗಿತ್ತು. ಮೂಲ ಚಿತ್ರದ ದೃಶ್ಯಗಳನ್ನು ಪದೇಪದೇ ನೋಡುತ್ತಿದ್ದರು. ಶಿವಾಜಿಯ ಹಾವಭಾವ, ಮಾತಿನ ಏರಿಳಿತ – ಎಲ್ಲವನ್ನೂ ಅಧ್ಯಯನ ಮಾಡುವುದು ಅವಶ್ಯವಿತ್ತು. ಸಂಜೀವ್ ಅದನ್ನೆಲ್ಲ ಅನುಕರಿಸುತ್ತಿರಲಿಲ್ಲ. ತಣ್ಣಗಿನ ದನಿಯಲ್ಲೇ ಅವರು ಮಾತನಾಡುತ್ತಿದ್ದುದು. ಹೀಗಾಗಿ ಚಿತ್ರಪಾತ್ರದ ಆತ್ಮವನ್ನಷ್ಟೇ ಇಟ್ಟುಕೊಂಡು ಅವರು ಮರುಸೃಷ್ಟಿ ಮಾಡುತ್ತಿದ್ದರು. ಇದನ್ನು ಶಿವಾಜಿ ಕೂಡ ಗುರುತಿಸಿ, ಶಹಬ್ಬಾಸ್‌ಗಿರಿ ಕೊಟ್ಟಿದ್ದರು.

ತೆಲುಗಿನಲ್ಲಿ ಎನ್.ಟಿ.ಆರ್. ನಟಿಸಿದ್ದ 'ದೇವುಡು ಚೇಸಿನ ಮನುಷುಲು' ಕೂಡ ಹಿಂದಿಗೆ ರೀಮೇಕ್ ಆದಾಗ ಅದರಲ್ಲಿ ಸಂಜೀವ್ ನಾಯಕರಾಗಿದ್ದರು. ಹಿಂದಿಯ ಸ್ವಮೇಕ್ ಚಿತ್ರ 'ಮೌಸಮ್' ಬಿಡುಗಡೆಯಾದ ಮೇಲೆ ಅದನ್ನು ಇಷ್ಟಪಟ್ಟು ಶಿವಾಜಿ ತಮಿಳಿನ ಅದರ ರೀಮೇಕ್‌ನಲ್ಲಿ ಅಭಿನಯಿಸಿದ್ದು ಇನ್ನೊಂದು ಆಸಕ್ತಿಕರ ಕಥೆ. 'ವಸಂತದಿಲ್ ಒರು ನಾಲ್' ಎನ್ನುವ ಹೆಸರಿನ ಚಿತ್ರ ಅದು.

ಸಂಜೀವ್ ಕುರಿತ ಪುಸ್ತಕವು ಇಂತಹ ಹಲವು ಆಸಕ್ತಿಕರ ಹೂರಣವನ್ನು ಅಡಗಿಸಿಟ್ಟುಕೊಂಡಿದೆ. ■

# ಅಮೀರ್ ಮೇಲೂ ಕಂಗನಾ ಟೀಕಾಸ್ತ್ರ



ಬಾಲಿವುಡ್‌ನಲ್ಲಿ ಕಳೆದ ಕೆಲವು ದಿನಗಳಲ್ಲಿ ಎರಡು ವಿಷಯಗಳು ಹೆಚ್ಚು ಚರ್ಚಿತವಾದವು. ಒಂದು, ರಣವೀರ್ ಸಿಂಗ್ ಬೆತ್ತಲೆ ಫೋಟೊಗಳ ಪೋಸ್ಟ್. ಇನ್ನೊಂದು, 'ಬಾಯ್ಕಾಟ್ ಲಾಲ್ ಸಿಂಗ್ ಛಡ್ಡಾ' ಹ್ಯಾಷ್‌ಟ್ಯಾಗ್. ರಣವೀರ್ ಅಂಥ ಫೋಟೊ ತೆಗೆಸಿಕೊಂಡರೆ, ತಮ್ಮಂಥವರ ಕಣ್ಣೂ ತಂಪಾಗುತ್ತಲ್ಲವೆ ಎಂದು ನಟಿ ವಿದ್ಯಾ ಬಾಲನ್ ತರಹದವರು ಹೇಳಿ, ಕೆಣಕಲು ಬಂದ ಕ್ಯಾಮೆರಾಗಳಿಗೆ ಸೆಡ್ಡು ಹೊಡೆದದ್ದೂ ಆಯಿತು. ಈಗ ಎಲ್ಲ ವಿವಾದಗಳ ದೂಳು ಕೊಡವಲೆಂದೇ ತಾವಿರುವುದು ಎನ್ನುವ ಧಾಟಿಯಲ್ಲಿ ಪ್ರತಿಕ್ರಿಯಿಸುವ ಕಂಗನಾ ರನೋಟ್, ಲಾಲ್ ಸಿಂಗ್... ಬಗೆಗೆ ಇನ್ನೊಂದು ಪುಗ್ಗ ಹಾರಿಬಿಟ್ಟಿದ್ದಾರೆ. ಅಮೀರ್ ಖಾನ್ ತಮ್ಮ ಚಿತ್ರದ ನೆಗೆಟಿವ್ ಪಬ್ಲಿಸಿಟಿಗಾಗಿ ತಾವಾಗಿಯೇ 'ಬಾಯ್ಕಾಟ್ ಲಾಲ್ ಸಿಂಗ್ ಛಡ್ಡಾ' ಅಭಿಯಾನ ಶುರುಮಾಡಿದ್ದಾರೆ ಎನ್ನುವುದು ಅವರ ಆರೋಪ. ಇದ್ಯಾವುದಕ್ಕೂ ಪ್ರತಿಕ್ರಿಯಿಸದೆ, ತಮ್ಮ ಚಿತ್ರವನ್ನು ನೋಡುವಂತೆ ಪ್ರೇಕ್ಷಕರಲ್ಲಿ ಅಮೀರ್ ವಿನಂತಿ ಮಾಡಿಕೊಂಡಿದ್ದಾರೆ. ■

